ಒ.ಎಸ್. ನಂ.135/2019
ಡಿಡಬ್ಲು-2

ದಿನಾಂಕ 05.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆ ಪಾಟಿ ಸವಾಲುಃ ವಾದಿ ಪರ ವಕೀಲರಿಂದ

ವಾದಿ ಸಲ್ಲಿಸಿದ ದಾವೆಗೆ ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ. ದಿನಾಂಕ 20.01.2017 ರಂದು ಖರೀದಿ ಪತ್ರವಾಗಿರುತ್ತದೆ. ನಿಪಿ-1 ರಲ್ಲಿ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿಪಿ-1 ರಲ್ಲಿ ಮಾರಾಟಗಾರರ ಸಹಿ ಯಾರದು ಎಂದು ಕೇಳಿದಾಗ ಸಾಕ್ಷಿ ಪ್ರತಿವಾದಿಯ ಸಹಿ ಇರುತ್ತದೆ ಎಂದು ಹೇಳುತ್ತಾರೆ. ನಿಪಿ-1 ರಲ್ಲಿ ಖರೀದಿದಾರರ ಸಹಿ ಯಾರದು ಎಂದು ಕೇಳಿದಾಗ ಸಾಕ್ಷಿ ವಾದಿಯ ಸಹಿ ಇರುತ್ತದೆ ಎಂದು ಹೇಳುತ್ತಾರೆ. ನಿಪಿ-1 ರಲ್ಲಿ ಸಾಕ್ಷಿದಾರರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.

ದಿನಾಂಕ 01.02.2017 ರಂದು ವಾದಿ ನನ್ನ ಎಸ್ ಬಿ ಐ ಬ್ಯಾಂಕ ಖಾತೆಗೆ ರೂ.49,000/- ಗಳನ್ನು ಜಮಾ ಮಾಡಿರುತ್ತಾರೆ ಎಂದರೆ ಸಾಕ್ಷಿ ವ್ಯವಹಾರ ಮುಗಿದಿರುತ್ತದೆ ಎಂದು ಹೇಳುತ್ತಾರೆ. ವಾದಿಯು ನನಗೆ ನೀಡಿದ ಹಣವನ್ನು ನಾನು ಮರಳಿ ಕೊಟ್ಟಿದ್ದು ಆದರೆ ಯಾವ ದಿನಾಂಕದಂದು ಮತ್ತು ಯಾರ ಸಮಕ್ಷಮ ಕೊಟ್ಟಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ವಾದಿಯು ದಾವೆ ಹಾಕಿದಾಗಿನಿಂದ ಪ್ರತಿ ದಿನಾಂಕದಂದು ಪ್ರತಿವಾದಿಯೊಂದಿಗೆ ನಾನು ನ್ಯಾಯಾಲಯಕ್ಕೆ ಬರುತ್ತೇನೆ ಎಂದರೆ ಸರಿ.

ದಿನಾಂಕ 04.07.2018 ರಂದು ಪ್ರತಿವಾದಿಯು ವಾದಿಗೆ ರೂ.4,00,000/- ಹಣವನ್ನು ಎಲ್ಲಿ ಮತ್ತು ಯಾರ ಸಮಕ್ಷಮ ನೀಡಿರುತ್ತಾರೆ ಎಂದರೆ ಸಾಕ್ಷಿ ನನ್ನ ಹಾಗೂ ಅಯ್ಯಣ್ಣಗೌಡರ ಸಮಕ್ಷಮ ಜೇವರ್ಗಿ ವಿಧಾನ ಸೌಧದ ಹೊರಗಡೆ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ದಿನಾಂಕ 04.07.2018 ರಂದು ವಿಧಾನ ಸೌಧ ಕಚೇರಿಗಳು ರಜೆ ಇರಲಿಲ್ಲ. ಪ್ರತಿವಾದಿಗೆ ವಾದಿಗೆ ನೀಡಿದ ಹಣ ಮುಖಬೆಲೆ ಎಷ್ಟು ಇದ್ದವು ಎಂದರೆ ಸಾಕ್ಷಿ 500 ಮುಖ ಬೆಲೆಯ ಒಟ್ಟು 2 ಲಕ್ಷ ರೂಪಾಯಿಗಳ ಬಂಡಲಗಳು ಮತ್ತು 100 ಮುಖಬೆಲೆಯ ಒಟ್ಟು 2 ಲಕ್ಷ ರೂಪಾಯಿಗಳ ಬಂಡಲಗಳು ಇದ್ದವು. 500 ರೂ. ಮುಖಬೆಲೆಯ ಒಟ್ಟು 04 ಬಂಡಲಗಳು ಮತ್ತು 100 ರೂ. ಮುಖಬೆಲೆಯ ಒಟ್ಟು 20 ಬಂಡಲಗಳು ಇದ್ದವು. ಈ ಕುರಿತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ.

ಪ್ರತಿವಾದಿಯು ವಾದಿಗೆ ಯಾವುದೆ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಿನಾಂಕ 27.11.2019 ರಂದು ಪ್ರತಿವಾದಿ ವಾದಿಗೆ ರೂ.1,55,000/- ಹಣ ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹಣಗಳ ಎಷ್ಟು ಬಂಡಲಗಳಿದ್ದವು ಎಂದು ನನಗೆ ಈಗ ನೆನಪಿಲ್ಲ. ನಾನು ಮತ್ತು ಪ್ರತಿವಾದಿಯ ನಡುವೆ ಒಳ್ಳೆಯ ಭಾಂದವ್ಯ ಇದೆ ಎಂದರೆ ಸರಿ. ಪ್ರತಿವಾದಿಯ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನನಗೆ ಸಾಲ ನೀಡಿದ ಹಣವನ್ನು ಕೇಳಿದ್ದರಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ